**ಓ ಎಸ್ 9/2021 ಪಿಡಬ್ಲ್ಯೂ2**

**ಸಾಕ್ಷಿಯನ್ನು ದಿಃ 05.06.2026 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ 1 ರಿಂದ 3 ಮತ್ತು 5 ನೇ ಪ್ರತಿವಾದಿಗಳ ಪರ ಶ್ರೀ ಎಸ್ ಪಿ ಎಸ್ ವಕೀಲರಿಂದಃ**

ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ನಿಶಾನೆ ಪಿ 32 ರಿಂದ 36 ರವರೆಗಿನ ದಾಖಲೆಗಳನ್ನು ಪಡೆದುಕೊಳ್ಳಲು ಸಂಬಂಧಪಟ್ಟ ಕಚೇರಿಗಳಿಗೆ ಅರ್ಜಿಯನ್ನು ನಾನೇ ಸಲ್ಲಿಸಿದ್ದೆ. ಒಳಚರಂಡಿಗೆ ಹೋಗಿದೆ ಎಂದು ದೇವೇಗೌಡರು ನೀಡಿರುವ ದಾಖಲೆಗಳು ಸುಳ್ಳು ಎಂದು ನಿಶಾನೆ ಪಿ 32 ರಿಂದ 37 ರಲ್ಲಿನ ದಾಖಲೆಗಳಲ್ಲಿ ಹೇಳಿದ್ದಾರೆ. ದೇವೇಗೌಡರ ಹೆಸರಿನಲ್ಲಿ ಭೂಸ್ವಾಧೀನಗೊಂಡಿರುವ ಸ್ವತ್ತನ್ನು ಈ ಕೇಸಿನಲ್ಲಿ ಸೇರಿಸಿದ್ದೇವೆ. ಆ ಸ್ವತ್ತು ದಾವಾ ಷೆಡ್ಯೂಲ್ ನ ಎಷ್ಟನೇ ಐಟಂ ಸ್ವತ್ತು ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ. 72/1 ಎ ರಲ್ಲಿನ 0.32 ಗುಂಟೆ ಹಾಗೂ 0.06 ಗುಂಟೆ, ಸರ್ವೆ ನಂ. 75/4 ರಲ್ಲಿ 0.40 ಗುಂಟೆ ಜಮೀನಿಗೆ ಕೇಸು ಹಾಕಿದ್ದೇವೆ. ನಿಶಾನೆ ಪಿ 32 ರಿಂದ 37 ರವರೆಗಿನ ದಾಖಲೆಗಳು ದಾವಾ ಷೆಡ್ಯೂಲ್ ಸ್ವತ್ತುಗಳಿಗೆ ಸಂಬಂಧಪಡದ ದಾಖಲೆಗಳು ಎಂದರೆ ಸರಿಯಲ್ಲ.

ನಿಶಾನೆ ಪಿ 37 ರಲ್ಲಿರುವ ಸ್ಕೆಚ್ ನ್ನು ಈಗ ಸುಮಾರು ಒಂದು ವರ್ಷದ ಹಿಂದೆ ತಯಾರು ಮಾಡಿದ್ದಾರೆ. ಅಳತೆ ಮಾಡಿ ಸ್ಕೆಚ್ ಮಾಡುವ ಸಮಯದಲ್ಲಿ ತಾಲ್ಲೋಕು ಕಚೇರಿಯ ಅಧಿಕಾರಿಗಳು, ಎ ಸಿ ಕಚೇರಿಯ ಅಧಿಕಾರಿಗಳು ಹಾಗೂ ನಾವು ಮತ್ತು ನಮ್ಮ ಸಂಬಂಧಿಕರು ಇದ್ದೆವು. ಅಳತೆ ಮಾಡುವುದಕ್ಕಿಂತ ಮೊದಲು ನಮಗೆ ನೋಟೀಸು ನೀಡಿರಲಿಲ್ಲ. ಸ್ಕೆಚ್‌ಗೆ ಸರ್ವೆಯರ್ ಭಾಸ್ಕರ್ ರವರು ಮತ್ತು ತಹಶೀಲ್ದಾರರವರು ತಾಲ್ಲೋಕು ಕಚೇರಿಯಲ್ಲಿ ಸಹಿ ಮಾಡಿದರು.

ನಿಶಾನೆ ಪಿ 38 ರಲ್ಲಿನ ಅರ್ಜಿಯನ್ನು ನಮ್ಮ ತಂದೆಯ ವಿರುದ್ಧ ವನಾಜಾಕ್ಷಮ್ಮರವರು ಸಲ್ಲಿಸಿದ್ದರು ಎಂದರೆ ಸರಿ. ಹಾಗೆಯೇ ನಿಶಾನೆ ಪಿ 39 ರಲ್ಲಿನ

ಅರ್ಜಿಯನ್ನು ನಮ್ಮ ತಂದೆಯ ವಿರುದ್ಧ ನಾಗರಾಜೇಗೌಡರ ಸಲ್ಲಿಸಿದ್ದರು ಎಂದರೆ ಸರಿ. ಸರ್ವೆ ನಂ. 72/1 ಎ ರಲ್ಲಿನ 0.32 ಗುಂಟೆ ಮತ್ತು ಸರ್ವೆ ನಂ. 75/4 ರಲ್ಲಿ 0.40 ಗುಂಟೆ ಜಮೀನನ್ನು ನಮ್ಮ ತಂದೆಯ ಹೆಸರಿನಲ್ಲಿ ಜಂಟಿ ಖಾತೆ ಇದ್ದ ಕಾರಣ ವನಾಜಾಕ್ಷಮ್ಮರವರು ನಮ್ಮ ತಂದೆಯ ವಿರುದ್ಧ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ತಹಶೀಲ್ದಾರರವರು ಮಾಡಿರುವ ನಿಶಾನೆ ಪಿ 40 ರಲ್ಲಿನ ಆದೇಶದ ವಿರುದ್ಧ ವನಾಜಾಕ್ಷಮ್ಮರವರು ಎ ಸಿ ರವರ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದಾರೆ ಎಂದರೆ ಸರಿ. ಎ ಸಿ ನ್ಯಾಯಾಲಯದಲ್ಲಿ ವನಾಜಾಕ್ಷಮ್ಮರವರು ತಡೆಯಾಜ್ಞೆ ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ನಿ ಪಿ 41 ರಲ್ಲಿನ ದಾಖಲೆಯು ಈ ಕೇಸಿಗೆ ಸಂಬಂಧಪಟ್ಟಿದೆ ಎಂದರೆ ಸರಿಯಲ್ಲ. ಯು ಜಿ ಡಿ ಗೆ ಹೋಗಿರುವ ಜಮೀನು ಆದ ಸರ್ವೆ ನಂ.72/1 ಎ ವಿಸ್ತೀರ್ಣ 0.31 ಗುಂಟೆ ಜಮೀನು ನಮ್ಮ ಅಜ್ಜಿಗೆ ಕ್ರಯ ಆಗಿದ್ದು ನಿಶಾನೆ ಪಿ 42 ರಲ್ಲಿನ ಕ್ರಯಪತ್ರವು ಸದರಿ ಕ್ರಯಕ್ಕೆ ಸಂಬಂಧಿಸಿದ ಪತ್ರವಾಗಿದೆ.

ದಾವಾ ಷೆಡ್ಯೂಲ್ ಸ್ವತ್ತುಗಳ ಸ್ವಾಧೀನದಲ್ಲಿ ನಾವು ಇದ್ದೇವೆ. ದಾವಾ ಷೆಡ್ಯೂಲ್ ಐಟಂ 1 ರಲ್ಲಿನ ಸರ್ವೆ ನಂ. 72/1 ಎ ವಿಸ್ತೀರ್ಣ ಖರಾಬು 0.01 ಗುಂಟೆ ಸೇರಿ ಒಟ್ಟು 0.32 ಗುಂಟೆ ಮತ್ತು ದಾವಾ ಷಡ್ಯೂಲ್ ಐಟಂ ನಂ. 2 ರಲ್ಲಿ ಸರ್ವೆ ನಂ. 75/4 ರಲ್ಲಿನ ವಿಸ್ತೀರ್ಣ 1 ಎಕರೆ 0.01 ಗುಂಟೆನಲ್ಲಿ ವನಾಜಾಕ್ಷಮ್ಮ ಹಾಗೂ 6 ನೇ ಪ್ರತಿವಾದಿಯು ದಿಾನಂಕ 17.09.1984 ರ ಪಾಲುಪಟ್ಟಿಯಂತೆ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

ದಾವಾ ಷಡ್ಯೂಲ್ ಐಟಂ ನಂ.1 ರಲ್ಲಿ ಸರ್ವೆ ನಂ.72/1 ಎ ವಿಸ್ತೀರ್ಣ 0.32 ಗುಂಟೆ ಪೈಕಿ 0.24 ಗುಂಟೆ ಜಮೀನು ಒಳಚರಂಡಿಗೆ ಭೂಸ್ವಾಧೀನಗೊಂಡಿದೆ. ದಾವಾ ಷಡ್ಯೂಲ್ ಐಟಂ ನಂ.1 ರಲ್ಲಿ ಸರ್ವೆ ನಂ.72/1 ಎ ವಿಸ್ತೀರ್ಣ 0.32 ಗುಂಟೆ ಪೈಕಿ 0.24 ಗುಂಟೆ ಜಮೀನು ಒಳಚರಂಡಿಗೆ ಭೂಸ್ವಾಧೀನಗೊಂಡಿದೆ ಎಂಬ ಬಗ್ಗೆ

ದಾಖಲೆಯನ್ನು ಹಾಜರುಪಡಿಸಿದ್ದೇನೆ. ದಾವಾ ಷೆಡ್ಯೂಲ್ ಐಟಂ ನಂ.1 ರಲ್ಲಿ ಸರ್ವೆ ನಂ.72/1 ಎ ವಿಸ್ತೀರ್ಣ 0.32 ಗುಂಟೆ ಪೈಕಿ 0.24 ಗುಂಟೆ ಜಮೀನಿನ ಆರ್ ಟಿ ಸಿ ವನಾಜಾಕ್ಷಮ್ಮ, ಸಿ ಕೆ ವೆಂಕಟೇಶ್ ಹಾಗೂ ಕೆ.ನಾಗರಾಜುರವರ ಹೆಸರಿನಲ್ಲಿ ಜಂಟಿಯಾಗಿ ಬರುತ್ತಿದೆ. ದಾವಾ ಷಡ್ಯೂಲ್ ಐಟಂ ನಂ.1 ರಲ್ಲಿ ಸರ್ವೆ ನಂ.72/1 ಎ ವಿಸ್ತೀರ್ಣ 0.32 ಗುಂಟೆ ಪೈಕಿ 0.24 ಗುಂಟೆ ಜಮೀನು ಒಳಚರಂಡಿಗೆ ಭೂಸ್ವಾಧೀನಗೊಂಡಿದೆ ಎಂದು ಆರ್ ಟಿ ಸಿ ನಮೂದು ಆಗಿದೆ. ಆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ದಾವಾ ಷಡ್ಯೂಲ್ ಐಟಂ ನಂ.1 ರಲ್ಲಿ ಸರ್ವೆ ನಂ.72/1 ಎ ವಿಸ್ತೀರ್ಣ 0.32 ಗುಂಟೆ ಪೈಕಿ 0.24 ಗುಂಟೆ ಜಮೀನು ಒಳಚರಂಡಿಗೆ ಭೂಸ್ವಾಧೀನಗೊಂಡಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

ನನ್ನ ಗಂಡ ಟಿ ಎ ಪಿ ಎಂ ಸಿ ಎಸ್ ಲಿ ರಲ್ಲಿ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದರು.ಈಗ 2 ವರ್ಷಗಳಿಂದ ಕೆಲಸ ಮಾಡುತ್ತಿಲ್ಲ. ನನ್ನ ಗಂಡ ಕೆಲಸದಿಂದ ಅಮಾನತ್ತುಗೊಂಡಿದ್ದಾರೆ ಎಂದು ಹೇಳಿ ಕೆಲಸ ಮಾಡುತ್ತಿಲ್ಲ. ನನ್ನ ಗಂಡ ಕಾನೂನು ಪದವಿಯನ್ನು ಓದಲು ಹೋಗಿದ್ದರು ಎಂದರೆ ಸರಿಯಲ್ಲ. ನನ್ನ ಗಂಡ ಟಿ ಎ ಪಿ ಎಂ ಸಿ ಎಸ್ ಲಿ ರಲ್ಲಿ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದಾಗ ಹಣ ದುರುಪಯೋಗ ಮಾಡಿದ್ದಾರೆ ಎಂದು ಹೇಳಿ ಅವರ ವಿರುದ್ಧ ಕೇಸು ಹಾಕಿದೆ ಎಂದರೆ ಸರಿ, ಆದರೆ ಯಾವುದೇ ದಾಖಲೆಯನ್ನು ಕೊಟ್ಟಿಲ್ಲ. ನನ್ನ ಗಂಡನ ವಿರುದ್ಧ ಸಹಾಯಕ ನಿಬಂಧನಾಧಿಕಾರಿಗಳ ನ್ಯಾಯಾಲಯದಲ್ಲಿ ಕೇಸು ನಡೆದು ಆರೋಪ ಸಾಬೀತಾಗಿದೆ ಎಂದರೆ ಸರಿಯಲ್ಲ. ನನ್ನ ಗಂಡ ಸಹಾಯಕ ನಿಬಂಧನಾಧಿಕಾರಿಗಳ ಆದೇಶದ ವಿರುದ್ಧ ಜಿಲ್ಲಾ ನಿಬಂಧನಾಧಿಕಾರಿಗಳ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದು ಆ ಮೇಲ್ಮನವಿಯು ವಜಾಗೊಂಡಿದೆ ಎಂದರೆ ಸರಿಯಲ್ಲ. ಸದರಿ ಮೇಲ್ಮನವಿಯು ವಜಾಗೊಂಡು ಹಣದ ದುರುಪಯೋಗ ಸಾಬೀತಾದ ಕಾರಣ ಟಿ ಎ ಪಿ ಎಂ ಸಿ ಎಸ್

ಲಿಮಿಟೆಡ್ ಮಂಡಳಿಯಲ್ಲಿ ನಿರ್ಣಯ ಕೈಗೊಂಡು ನನ್ನ ಗಂಡನನ್ನು ಕೆಲಸದಿಂದ ವಜಾ ಮಾಡಿದ್ದಾರೆ  ಎಂದರೆ ಸರಿಯಲ್ಲ. ಹಾಗೆ ನನ್ನ ಗಂಡನನ್ನು ವಜಾಗೊಳಿಸಿದ ಸಮಯದಲ್ಲಿ ಈ ದಾವೆಯ 3 ನೇ ಪ್ರತಿವಾದಿಯಾದ ಶ್ರೀನಿವಾಸ್ ರವರು ಟಿ ಎ ಪಿ ಎಂ ಸಿ ಎಸ್ ಲಿ ನ ಅಧ್ಯಕ್ಷರಾಗಿದ್ದರು ಎಂದರೆ ಸರಿ. ನನ್ನ ಗಂಡನನ್ನು ಕೆಲಸದಿಂದ ತೆಗೆದು ಹಾಕಿದ್ದಾರೆ ಎಂಬ ದ್ವೇಷದಿಂದ ನಿಶಾನೆ ಪಿ 32 ರಿಂದ 37 ರವರೆಗಿನ ದಾಖಲೆಗಳನ್ನು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾಖಲೆಗಳು ಈ ಕೇಸಿಗೆ ಸಂಬಂಧಪಡದೆ ಇದ್ದರೂ ಸಹ ವಿವಾದ ಉಂಟು ಮಾಡುವ ಸಲುವಾಗಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

**6 ನೇ ಪ್ರತಿವಾದಿ ಪರ ವಕೀಲರ ಕೋರಿಕೆ ಮೇರೆಗೆ ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**